Series : RQ3SP

SET~4

ಪ್ರಶ್ನೆ ಪತ್ರಿಕೆ ಕೋಡ್ ನಂ. ೧೫ **15**

Q.P. Code No.

ಅನುಕ್ರಮಾಂಕ ಸಂಖ್ಯೆ
Roll No.

| | | | | | | | |
|---|---|---|---|---|---|---|---|
| | | | | | | | |

ಅಭ್ಯರ್ಥಿಯು ಪ್ರಶ್ನೆ ಪತ್ರಿಕೆ ಕೋಡ್ ಅನ್ನು ಉತ್ತರ ಪತ್ರಿಕೆ ಮುಖಪುಟದಲ್ಲಿ ಅವಶ್ಯವಾಗಿ ಬರೆಯಿರಿ.

Candidates must write the Q.P. Code on the title page of the answer-book.

# ಕನ್ನಡ

# KANNADA

*ಅನುಮತಿಸಲಾದ ಸಮಯ : 3 ಗಂಟೆ* | *ಗರಿಷ್ಠ ಅಂಕಗಳು : 80*

*Time allowed : 3 hours* | *Maximum Marks : 80*

**ಸೂಚನೆ :**

(I) ಈ ಪ್ರಶ್ನೆಪತ್ರಿಕೆಯಲ್ಲಿ **15** ಮುದ್ರಿತ ಪುಟಗಳಿವೆಯೆಂಬುದನ್ನು ಪರಿಶೀಲಿಸಿ.

(II) ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿ ಕೊಟ್ಟಿರುವ ಕೋಡ್ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಮುಖ ಪುಟದಲ್ಲಿ ಅಭ್ಯರ್ಥಿಯು ಬರೆಯಬೇಕು.

(III) ಈ ಪ್ರಶ್ನೆ ಪತ್ರಿಕೆಯಲ್ಲಿ **13** ಪ್ರಶ್ನೆಗಳಿವೆ ಎಂಬುದನ್ನು ಗಮನಿಸಿ.

(IV) **ಉತ್ತರಿಸುವುದಕ್ಕೆ ಮೊದಲು ಪ್ರಶ್ನೆಯ ಕ್ರಮ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಯಥಾಸ್ಥಾನದಲ್ಲಿ ಬರೆಯಿರಿ.**

(V) ಈ ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆ ಪತ್ರಿಕೆಯನ್ನು 10.15 a.m. ಗೆ ವಿತರಿಸಲಾಗುವುದು. 10.15 a.m. ನಿಂದ 10.30 a.m. ರ ತನಕ ವಿದ್ಯಾರ್ಥಿಗಳು ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಬೇಕು ಮತ್ತು ಈ ಅವಧಿಯಲ್ಲಿ ಯಾವುದೇ ಉತ್ತರವನ್ನು ಉತ್ತರ ಪತ್ರಿಕೆಯಲ್ಲಿ ಬರೆಯಬಾರದು.

**NOTE :**

(I) Please check that this question paper contains **15** printed pages.

(II) Q.P. Code given on the right hand side of the question paper should be written on the title page of the answer-book by the candidate.

(III) Please check that this question paper contains **13** questions.

(IV) **Please write down the serial number of the question in the answer-book at the given place before attempting it.**

(V) 15 minute time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the candidates will read the question paper only and will not write any answer on the answer-book during this period.

**General Instructions :**

Read the following instructions carefully and follow :

1. This question paper is divided into **4** Sections.

   It has Total **13** questions.

2. **Section A :** 02 Question No. **1** to **2**.

3. **Section B :** 02 Question No. **3** to **4**.

4. **Section C :** 03 Question No. **5** to **7**.

5. **Section D :** 06 Question No. **8** to **13**.

   Attempt Questions as per specific instructions.

   Write Question No. in answer book before attempting it.

**ಸೂಚನೆಗಳು :**

**ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :**

1. ಪ್ರಶ್ನೆ ಪತ್ರಿಕೆಯು **4** ವಿಭಾಗಗಳನ್ನು ಒಳಗೊಂಡಿದೆ.

   ಈ ಪ್ರಶ್ನೆ ಪತ್ರಿಕೆಯಲ್ಲಿ ಒಟ್ಟು **13** ಪ್ರಶ್ನೆಗಳಿವೆ.

2. **ವಿಭಾಗ -A :** 02 ಪ್ರಶ್ನೆ ಸಂಖ್ಯೆ **1** to **2**.

3. **ವಿಭಾಗ -B :** 02 ಪ್ರಶ್ನೆ ಸಂಖ್ಯೆ **3** to **4**.

4. **ವಿಭಾಗ -C :** 03 ಪ್ರಶ್ನೆ ಸಂಖ್ಯೆ **5** to **7**.

5. **ವಿಭಾಗ -D :** 06 ಪ್ರಶ್ನೆ ಸಂಖ್ಯೆ **8** to **13**.

   ನೀಡಿರುವ ನಿರ್ದಿಷ್ಟ ಸೂಚನೆಗಳಂತೆ ಪ್ರಶ್ನೆಗಳಿಗೆ ಉತ್ತರಿಸಿ.

   ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಪ್ರಶ್ನೆ ಸಂಖ್ಯೆಯನ್ನು ನಮೂದಿಸಿ.

## PART – A

### Section – A

**(ವಾಚನ ಮತ್ತು ಗ್ರಹಿಕಾ ಕೌಶಲ : 10 ಅಂಕಗಳು)**

**1.** ಕೆಳಗಿನ ಗದ್ಯಭಾಗವನ್ನು ಓದಿ, ಕೊಟ್ಟಿರುವ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ. **5 × 1 = 5**

ಸಾಮಾಜಿಕ ಜಾಲತಾಣಗಳನ್ನು ನಿಷೇಧಿಸಲು ಕಾನೂನನ್ನು ತರುವುದಾಗಿ ಅನೇಕ ರಾಷ್ಟ್ರಗಳು ಆಲೋಚಿಸುತ್ತಿವೆ ಎಂದರೆ ಈ ಸಮಸ್ಯೆಯ ತೀವ್ರತೆ ಎಷ್ಟಿದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬಹುದು. ಈ ರೀತಿಯ ನಿಷೇಧ ಫ್ರಾನ್ಸ್ ಮತ್ತು ಅಮೆರಿಕದಲ್ಲಿ ಈಗಾಗಲೇ ಇದೆ. ಫ್ರಾನ್ಸ್‌ನಲ್ಲಿ 15 ವರ್ಷದಿಂದ ಕೆಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ನಿಷೇಧವಿದೆ, ಆದರೆ ಅವರುಗಳು ತಮ್ಮ ಹೆತ್ತವರ ಅನುಮತಿ ಪಡೆದುಕೊಂಡು ಬಳಸಬಹುದು. ಅಮೆರಿಕದಲ್ಲಿ 13 ವರ್ಷಗಳಿಗಿಂತ ಕಡಿಮೆಯ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ನಿಷಿದ್ಧವಿದೆ. ಇದರರ್ಥ ಈ ಎಲ್ಲಾ ದೇಶಗಳಲ್ಲೂ ಗ್ಯಾಜೆಟ್‌ಗಳ ಹಾವಳಿಗಳನ್ನು ಮತ್ತು ಅದರಿಂದಾಗುತ್ತಿರುವ ದುಷ್ಪರಿಣಾಮಗಳನ್ನು ಕಂಡುಕೊಂಡಿದ್ದಾರೆ. ಹಾಗಾದರೆ, ನಮ್ಮ ದೇಶದಲ್ಲೂ ಇಂಥ ಕಾನೂನಿನ ಅಗತ್ಯವಿದೆಯೇ ಎಂಬ ಒಂದು ತರ್ಕ ನಮ್ಮ ಮನದಲ್ಲಿ ಮೂಡುತ್ತಿದೆ. ಬಹುಶಃ ಇನ್ನು ಕೆಲವೇ ವರ್ಷಗಳಲ್ಲಿ ಈ ಕಾನೂನು ಬರಬಹುದು.

ಕಾನೂನು ಬರಲಿ, ಬಾರದೇ ಇರಲಿ, ಹೆತ್ತವರಾಗಿ ಮಕ್ಕಳನ್ನು ಗ್ಯಾಜೆಟ್‌ಗಳಿಂದ ದೂರವಿಡುವುದು ನಮ್ಮ ಕರ್ತವ್ಯ. ಯಾಕೆಂದರೆ ಮನಃಶಾಸ್ತ್ರೀಯ ಅಧ್ಯಯನಗಳ ಪ್ರಕಾರ, ಕನಿಷ್ಠ 12 ವರ್ಷಗಳವರೆಗೆ ಮಕ್ಕಳಿಗೆ ಯಾವುದೇ ರೀತಿಯ ಗ್ಯಾಜೆಟ್‌ಗಳ ಅವಕಾಶ ಸಿಗದಿದ್ದರೆ ಒಳ್ಳೆಯದು. ಅಂದರೆ ಮಕ್ಕಳನ್ನು ಸಂಪೂರ್ಣವಾಗಿ ಗ್ಯಾಜೆಟ್‌ಗಳಿಂದ ದೂರ ಇಡಬೇಕು. ಆದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ಅದು ಕಷ್ಟ ಸಾಧ್ಯ. ಯಾಕೆಂದರೆ ನಾವೆಲ್ಲರೂ ಗ್ಯಾಜೆಟ್‌ಗಳಿಗೆ ಅಧೀನರಾಗಿ ಬಿಟ್ಟಿದ್ದೇವೆ. ಗ್ಯಾಜೆಟ್‌ಗಳು ಇಲ್ಲ ಎಂದರೆ ನಮ್ಮ ಜೀವನವೇ ನಡೆಯುವುದಿಲ್ಲವೇನೋ ಎಂಬ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಆದರೂ ಮಕ್ಕಳನ್ನು ಗ್ಯಾಜೆಟ್‌ಗಳಿಂದ ವಿಮುಖರಾಗುವಂತೆ ಮಾಡಬಹುದು.

ಬೆಳೆದಿರುವ ಮಕ್ಕಳಿಗೆ ಏನು ಮಾಡುವುದು ಎಂಬುದು ಪ್ರಶ್ನೆ. ಯಾಕೆಂದರೆ ಅವರುಗಳೆಲ್ಲರೂ ಈಗಾಗಲೇ ಗ್ಯಾಜೆಟ್ ಲೋಕದಲ್ಲಿ ಮುಳುಗಿ ಹೋಗಿದ್ದಾರೆ. ಅಂತಹ ಸಂದರ್ಭದಲ್ಲಿ ಮನೆಗಳಲ್ಲಿ ಸಾಮೂಹಿಕವಾಗಿ ಗ್ಯಾಜೆಟ್‌ಗಳನ್ನು ದೂರ ಮಾಡುವ ಸಾಂಸ್ಕೃತಿಕ ಬದಲಾವಣೆ ನಡೆಯಬೇಕು. ಮಕ್ಕಳಿಗೆ ಪುಸ್ತಕ ಓದುವ ಹವ್ಯಾಸ ಇರಬೇಕೆಂದರೆ, ಅದಕ್ಕೆ ಬೇಕಾದ ವಾತಾವರಣವನ್ನು ಸೃಷ್ಟಿ ಮಾಡಬೇಕು.

ಪ್ರಶ್ನೆಗಳು :

I. ಕೆಳಗಿನ ಹೇಳಿಕೆಗಳಲ್ಲಿ ಯಾವ ಹೇಳಿಕೆ ಸರಿ, ಯಾವ ಹೇಳಿಕೆ ತಪ್ಪಾಗಿದೆ ? **1**

(i) ಅಮೆರಿಕದಲ್ಲಿ 13 ವರ್ಷಗಳಿಗಿಂತ ಕಡಿಮೆಯ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ನಿಷಿದ್ಧವಿದೆ.

(ii) ಕನಿಷ್ಠ 12 ವರ್ಷಗಳವರೆಗೆ ಮಕ್ಕಳಿಗೆ ಯಾವುದೇ ರೀತಿಯ ಗ್ಯಾಜೆಟ್‌ಗಳ ಅವಕಾಶ ಸಿಗದಿದ್ದರೆ ಒಳ್ಳೆಯದು.

(A) ಮೇಲಿನ ಎರಡೂ ಹೇಳಿಕೆಗಳು ಸರಿ

(B) ಮೊದಲನೆ ಹೇಳಿಕೆ ಸರಿ, ಎರಡನೆ ಹೇಳಿಕೆ ತಪ್ಪು

(C) ಮೊದಲನೆ ಹೇಳಿಕೆ ತಪ್ಪು, ಎರಡನೆ ಹೇಳಿಕೆ ಸರಿ

(D) ಮೇಲಿನ ಎರಡೂ ಹೇಳಿಕೆಗಳು ತಪ್ಪು

II. ಮಕ್ಕಳಿಗೆ ಪುಸ್ತಕ ಓದುವ ಹವ್ಯಾಸ ಇರಬೇಕೆಂದರೆ, ಏನು ಮಾಡಬೇಕು ? **1**

(A) ಅದಕ್ಕೆ ಬೇಕಾದ ಸಹಕಾರವನ್ನು ನೀಡಬೇಕು

(B) ಅದಕ್ಕೆ ಬೇಕಾದ ಫೀಜನ್ನು ಕಟ್ಟಬೇಕು

(C) ಅದಕ್ಕೆ ಬೇಕಾದ ಪುಸ್ತಕಗಳನ್ನು ತಂದುಕೊಡಬೇಕು

(D) ಅದಕ್ಕೆ ಬೇಕಾದ ವಾತಾವರಣವನ್ನು ಸೃಷ್ಟಿಸಬೇಕು

III. ಯಾವ ದೇಶದಲ್ಲಿ 15 ವರ್ಷದಿಂದ ಕೆಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ನಿಷೇಧವಿದೆ ? **1**

(A) ಅಮೆರಿಕ (B) ಆಸ್ಟ್ರೇಲಿಯಾ

(C) ಫ್ರಾನ್ಸ್ (D) ಕೆನಡಾ

IV. ಮಕ್ಕಳು ಯಾವ ಲೋಕದಲ್ಲಿ ಮುಳುಗಿ ಹೋಗಿದ್ದಾರೆ ? **1**

(A) ಕಲ್ಪನಾಲೋಕ (B) ಆಟೋಟಗಳ ಲೋಕದಲ್ಲಿ

(C) ಗ್ಯಾಜೆಟ್ ಲೋಕದಲ್ಲಿ (D) ಸಂಗೀತ ಲೋಕದಲ್ಲಿ

V. ಏನನ್ನು ನಿಷೇಧಿಸಲು ಕಾನೂನನ್ನು ತರುವುದಾಗಿ ಅನೇಕ ರಾಷ್ಟ್ರಗಳು ಆಲೋಚಿಸುತ್ತಿವೆ ? **1**

(A) ಧೂಮಪಾನವನ್ನು (B) ಸಾಮಾಜಿಕ ಜಾಲತಾಣಗಳನ್ನು

(C) ಮದ್ಯಪಾನವನ್ನು (D) ನುಸುಳುಕೋರರನ್ನು

2. ಕೆಳಗಿನ ಗದ್ಯಭಾಗವನ್ನು ಓದಿ, ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ. $5 \times 1 = 5$

ವಿಶ್ವಸಂಸ್ಥೆಯು ಡಿಸೆಂಬರ್ 21 ನ್ನು 'ವಿಶ್ವ ಧ್ಯಾನ ದಿನ' ವನ್ನಾಗಿ ಘೋಷಿಸಿದೆ. ಈಗಾಗಲೇ ಪ್ರತಿವರ್ಷದ ಜೂನ್ 21 ರಂದು 'ವಿಶ್ವ ಯೋಗ ದಿನ'ವನ್ನು ಆಚರಿಸುತ್ತಿದ್ದೇವೆ. ಯೋಗಕ್ಕೆ ಈಗ ಧ್ಯಾನವೂ ಸೇರಿಕೊಂಡು ಒಟ್ಟು ಯೋಗದರ್ಶನಕ್ಕೆ ಜಾಗತಿಕ ಮಟ್ಟದಲ್ಲಿ ಮನ್ನಣೆ ಸಿಕ್ಕಂತಾಗಿದೆ.

ಜೀವನ ಸಾರ್ಥಕಗೊಳಿಸಿಕೊಳ್ಳಲು ಮನುಷ್ಯನಿಗೆ ಬೇಕಾದ ಮೊದಲ ಸಲಕರಣೆ ಎಂದರೆ ಅವನ ಶರೀರವೇ. ಹೀಗಾಗಿ ಶರೀರವನ್ನು ಚೆನ್ನಾಗಿ ಇಟ್ಟುಕೊಳ್ಳಬೇಕೆಂಬ ತುಡಿತವೂ ಎಚ್ಚರಿಕೆಯೂ ಭಾರತೀಯ ಸಂಸ್ಕೃತಿಯಲ್ಲಿ ಸ್ಪಷ್ಟವಾಗಿದೆ. 'ಧರ್ಮದ ದಾರಿಯಲ್ಲಿ ಶರೀರವೇ ಮೊದಲ ಸಾಧನ' ಎಂಬುದು ಈ ನೆಲದ ಮಂತ್ರ. ಮೋಕ್ಷವೇ ಧರ್ಮಸಾಧನೆಯ ಅಂತಿಮ ಗುರಿ. ಹೀಗಾಗಿ ಧರ್ಮಕ್ಕೂ ಶರೀರಕ್ಕೂ ಮೋಕ್ಷಕ್ಕೂ ನೇರ ನಂಟು ಇದೆ. ಈ ತಾತ್ವಿಕ ಭಿತ್ತಿಯಲ್ಲಿ ಸಿದ್ಧವಾದ ಕಾಣ್ಕೆಯೇ ಯೋಗದರ್ಶನ. ಇದು ಭಾರತೀಯ ದರ್ಶನ ಪರಂಪರೆಯಲ್ಲಿ ಮುಖ್ಯ ಸ್ಥಾನವನ್ನು ಪಡೆದಿದೆ.

ಯೋಗ ಎಂದರೆ ಈಗ ಸಾಮಾನ್ಯರ ಗ್ರಹಿಕೆಯಲ್ಲಿ ಆಸನಗಳು ಮಾತ್ರ. ಆದರೆ ಯೋಗದರ್ಶನ ಪ್ರಾಪ್ತಿ ಇನ್ನೂ ವಿಸ್ತಾರವೂ ಆಳವೂ ಆಗಿದೆ. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿ ಈ ಎಂಟು ಸಾಧನೆಗಳನ್ನು ಒಳಗೊಂಡಿರುವುದೇ ದಿಟವಾದ 'ಯೋಗ'. ಇವು ಬೌದ್ಧಿಕ, ಶಾರೀರಿಕ ಮತ್ತು ಮಾನಸಿಕ ಸಾಧನೆಗೆ ಒದಗಿರುವ ಮೆಟ್ಟಿಲುಗಳು. ಕೊನೆಯಲ್ಲಿ ಎಲ್ಲದಕ್ಕೂ ಶಿಖರಪ್ರಾಯವಾಗಿ ಪ್ರಜ್ಞೆಯ ಬೆಳಕು ದಿಕ್ಸೂಚಿಯಾಗಿರುತ್ತದೆ.

'ಧ್ಯಾನ' ಎಂದರೆ ಏನು ? ಮನಸ್ಸಿನ ಏಕಾಗ್ರತೆ. ಇದು ಯೋಗದ ಅಂಗಗಳಲ್ಲಿ ಒಂದು. ಮೊದಲಿಗೆ ನಮ್ಮ ನಿತ್ಯದ ಚಟುವಟಿಕೆಗಳನ್ನು ನಮ್ಮ ಒಳಿತಿಗೆ ಪೂರಕವಾಗಿರುವಂತೆ ಹದ ಮಾಡಿಕೊಳ್ಳಬೇಕು. ಆ ಬಳಿಕ ನಮ್ಮ ಶರೀರವನ್ನು ಹೀಗೆ ಸಿದ್ಧಮಾಡಿಕೊಳ್ಳಬೇಕು. ಆನಂತರ ನಮ್ಮ ಮನಸ್ಸನ್ನು ನಮ್ಮ ನಿಯಂತ್ರಣದಲ್ಲಿಟ್ಟುಕೊಳ್ಳಲು ತೊಡಗಬೇಕು. ನಮ್ಮ ಎಲ್ಲ ಆಗುಹೋಗುಗಳಿಗೂ ಮೂಲ ಕಾರಣವೇ ಮನಸ್ಸು. ಇದನ್ನು ನಮ್ಮ ವಶದಲ್ಲಿಟ್ಟುಕೊಳ್ಳುವುದು ಸುಲಭವಲ್ಲ. ಹೀಗೆ ಮನಸ್ಸನ್ನು ಹದಗೊಳಿಸುವ ಉಪಾಯವೇ ಧ್ಯಾನ ಎನಿಸಿಕೊಳ್ಳುತ್ತದೆ. ಇಷ್ಟೂ ಸೇರಿದಾಗಲೇ ಅದು ಯೋಗ ಎನಿಸಿಕೊಳ್ಳುವುದು.

ಪ್ರಶ್ನೆಗಳು :

I. ಕೆಳಗಿನ ಹೇಳಿಕೆಗಳಲ್ಲಿ ಯಾವ ಹೇಳಿಕೆ ಸರಿ, ಯಾವ ಹೇಳಿಕೆ ತಪ್ಪಾಗಿದೆ ? 1

(i) ನಾವು ಪ್ರತಿವರ್ಷ ಡಿಸೆಂಬರ್ 21 ರಂದು 'ಯೋಗ ದಿನ'ವನ್ನಾಗಿ ಆಚರಿಸುತ್ತೇವೆ.

(ii) ಪ್ರತಿವರ್ಷ ಜೂನ್ 21 ರಂದು 'ಧ್ಯಾನ ದಿನ'ವನ್ನಾಗಿ ಘೋಷಿಸಲಾಗಿದೆ.

(A) ಮೇಲಿನ ಎರಡೂ ಹೇಳಿಕೆಗಳು ಸರಿ

(B) ಮೊದಲನೆ ಹೇಳಿಕೆ ಸರಿ, ಎರಡನೆ ಹೇಳಿಕೆ ತಪ್ಪು

(C) ಮೊದಲನೆ ಹೇಳಿಕೆ ತಪ್ಪು , ಎರಡನೆ ಹೇಳಿಕೆ ಸರಿ

(D) ಮೇಲಿನ ಎರಡೂ ಹೇಳಿಕೆಗಳು ತಪ್ಪು

II. ನಮ್ಮ ಎಲ್ಲ ಆಗುಹೋಗುಗಳಿಗೂ ಮೂಲ ಯಾವುದು ? 1

(A) ಕಣ್ಣು (B) ಮನಸ್ಸು

(C) ಪಂಚೇಂದ್ರಿಯಗಳು (D) ಆಲೋಚನೆಗಳು

III. ಯೋಗಕ್ಕೆ ಈಗ ಯಾವುದು ಸೇರಿಕೊಂಡು ಒಟ್ಟು ಯೋಗದರ್ಶನಕ್ಕೆ ಜಾಗತಿಕ ಮಟ್ಟದಲ್ಲಿ ಮನ್ನಣೆ ಸಿಕ್ಕಂತಾಗಿದೆ ? 1

(A) ಪ್ರಾಣಾಯಾಮವೂ (B) ಪ್ರತ್ಯಾಹಾರವೂ

(C) ಧ್ಯಾನವೂ (D) ಧಾರಣವೂ

IV. ಯಾವ ಉಪಾಯ ಧ್ಯಾನ ಎನಿಸಿಕೊಳ್ಳುತ್ತದೆ ? 1

(A) ಮನಸ್ಸನ್ನು ಹದಗೊಳಿಸುವ (B) ಬುದ್ಧಿ ನಿಯಂತ್ರಣದ

(C) ಪಂಚೇಂದ್ರಿಯಗಳ ಹಿಡಿತದ (D) ವ್ಯಾಸಂಗದಲ್ಲಿ ನಿರತನಾಗಿರುವ

V. ದಿಟವಾದ ಯೋಗವು ಎಷ್ಟು ಸಾಧನೆಗಳನ್ನು ಒಳಗೊಂಡಿದೆ ? 1

(A) 2 (B) 8

(C) 5 (D) 3

## Section – B

### (ಅನ್ವಯಿಕ ವ್ಯಾಕರಣ : 16 ಅಂಕಗಳು)

3. ಕೆಳಗೆ ವ್ಯಾಕರಣಾಂಶಗಳ ಬಹು ಆಯ್ಕೆಯ 10 ಪ್ರಶ್ನೆಗಳಿವೆ. ಎಲ್ಲ ಪ್ರಶ್ನೆಗಳಿಗೆ ಉತ್ತರಿಸಿರಿ. **10 × 1 = 10**

I. ಕೆಳಗಿನ ಪದದ ಸಂಧಿ ಹೆಸರಿಸಿ.

ಸಿಟ್ಟಿನುರಿಗೆ **1**

(A) ಆಗಮ ಸಂಧಿ (B) ಲೋಪ ಸಂಧಿ

(C) ಆದೇಶ ಸಂಧಿ (D) ಗುಣ ಸಂಧಿ

II. ಕೆಳಗಿನ ಪದದ ಸಮಾಸ ಹೆಸರಿಸಿ.

ನವಮಾಸಗಳು **1**

(A) ಅಂಶಿ ಸಮಾಸ (B) ಕ್ರಿಯಾ ಸಮಾಸ

(C) ಗಮಕ ಸಮಾಸ (D) ದ್ವಿಗು ಸಮಾಸ

III. ಕೆಳಗಿನ ಪದದ ಗ್ರಾಂಥಿಕ ರೂಪ ಬರೆಯಿರಿ.

ಹಾವಿಗ್ಯಾಕೆ **1**

(A) ಹಾವು ಏಕೆ ? (B) ಹಾವಿನಲ್ಲಿ ಏಕೆ ?

(C) ಹಾವಿಗೆ ಏಕೆ ? (D) ಹಾವಿನಲ್ಲಿ

IV. ಕೆಳಗಿನ ವಾಕ್ಯವನ್ನು ಭವಿಷ್ಯತ್ ಕಾಲಕ್ಕೆ ಪರಿವರ್ತಿಸಿ.

ರಾಜ್ಯಗಳ ಸಂಬಂಧದಲ್ಲಿ ಮುಖ್ಯ ವಿಷಯವಾಗುತ್ತದೆ **1**

(A) ರಾಜ್ಯಗಳ ಸಂಬಂಧದಲ್ಲಿ ಮುಖ್ಯ ವಿಷಯವಾಗುತ್ತದೆ

(B) ರಾಜ್ಯಗಳ ಸಂಬಂಧದಲ್ಲಿ ಮುಖ್ಯ ವಿಷಯವಾಗುವುದು

(C) ರಾಜ್ಯಗಳ ಸಂಬಂಧದಲ್ಲಿ ಮುಖ್ಯ ವಿಷಯವಾಯಿತು

(D) ರಾಜ್ಯಗಳ ಸಂಬಂಧದಲ್ಲಿ ಮುಖ್ಯ ವಿಷಯವಾಗಲಿ

V. ಕೆಳಗಿನ ವಾಕ್ಯದಲ್ಲಿರುವ ಕ್ರಿಯಾಪದದ ಧಾತುವನ್ನು ತಿಳಿಸಿ.

ಹವಾಮಾನ ಇಲಾಖೆಯು ಕೆಲ ಜಿಲ್ಲೆಗಳಿಗೆ ರೆಡ್ ಅಲರ್ಟ್ ಘೋಷಿಸಿದೆ. 1

(A) ಘೋಷಿಸಲಿ (B) ಘೋಷಿಸಬಹುದು

(C) ಘೋಷಿಸು (D) ಘೋಷಣೆ

VI. ಕೆಳಗಿನ ಪದವನ್ನು ಬಿಡಿಸಿ ಬರೆಯಿರಿ.

ಬಂಧುವೇತಕೆ 1

(A) ಬಂಧು + ವೇತಕೆ (B) ಬಂಧು + ಏತಕೆ

(C) ಬಂಧುವಿನಲ್ಲಿ + ಏತಕೆ (D) ಬಂಧುವಿನಿಂದ + ಏತಕೆ

VII. ಕೆಳಗಿನ ಪದದಲ್ಲಿರುವ ವಿಭಕ್ತಿಯನ್ನು ತಿಳಿಸಿ.

ಅವಳಿಗೆ 1

(A) ಸಂಬೋಧನಾ (B) ಷಷ್ಠಿ

(C) ಚತುರ್ಥಿ (D) ದ್ವಿತೀಯಾ

VIII. ಕೆಳಗಿನ ಪದದ ತತ್ಸಮ – ತದ್ಭವ ರೂಪ ಬರೆಯಿರಿ.

ಜೋಗಿ 1

(A) ಮುನಿ (B) ಋಷಿ

(C) ಜಂಗಮ (D) ಯೋಗಿ

IX. ಕೆಳಗಿನ ಪದದ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಕಾಂತಾರ 1

(A) ಹೊಳಪು, ಕಾನನ (B) ಕಾಡು, ಅರಣ್ಯ

(C) ಹದುಳ, ಕಾಂತಿ (D) ಕಾಂತಿ, ಪತಿ

X. ಕೆಳಗಿನ ಪದದ ಅನೇಕಾರ್ಥಗಳನ್ನು ಬರೆಯಿರಿ.

ಅರಿ 1

(A) ತಿಳಿ, ಶತ್ರು (B) ಕತ್ತರಿಸು, ಅರಸು

(C) ಅರಿವು, ಪ್ರಕಾಶ (D) ತಿಳುವಳಿಕೆ, ಅರಸ

4. ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಯಂತೆ ಉತ್ತರಿಸಿರಿ.

I. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ ಛಂದಸ್ಸನ್ನು ಹೆಸರಿಸಿ. **2**

ಗುಣಪರಿಪಾಲನಾರ್ಥಮೆನಗಂ ಬಗೆದೋಱಿದಳಿಲ್ಲ ದಿವ್ಯಭೂ

II. ಕೆಳಗಿನ **ಯಾವುದಾದರೊಂದು** ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ. **1 × 2 = 2**

(i) ಕುಂಬಾರನಿಗೆ ವರುಷ , ದೊಣ್ಣೆಗೆ ನಿಮಿಷ

(ii) ಹೊಳೆಯುವುದೆಲ್ಲ ಚಿನ್ನವಲ್ಲ

III. ಕೆಳಗಿನ ವಾಕ್ಯವನ್ನು ಕರ್ಮಣಿ ವಾಕ್ಯವನ್ನಾಗಿ ಬದಲಿಸಿ. **1**

ಉಸ್ತುವಾರಿ ಸಚಿವರು ಸಂತ್ರಸ್ತರ ಅಹವಾಲುಗಳನ್ನು ಸ್ವೀಕರಿಸಿದರು

IV. ಕೆಳಗಿನ ವಾಕ್ಯವನ್ನು ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ. **1**

ಯೋಧರು ಮತ್ತು ಮಾಜಿ ಸೈನಿಕರ ಕಲ್ಯಾಣಕ್ಕೆ ಸರ್ಕಾರ ಬದ್ಧವಾಗಿದೆ

## Section – C

**(ವಾಚನ ಮತ್ತು ಗ್ರಹಿಕಾ ಕೌಶಲ : 14 ಅಂಕಗಳು)**

5. ಕೆಳಗಿನ ಪದ್ಯಭಾಗವನ್ನು ಓದಿ, ಕೊಟ್ಟಿರುವ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ. **5 × 1 = 5**

ಜಾಲಿಯ ಮರದಂತೆ ಧರೆಯೊಳು ದುರ್ಜನರು
ಮೂಲಾಗ್ರ ಪರಿಯಂತ ಮುಳ್ಳು ಕೂಡಿಪ್ಪಂತೆ

ಬಿಸಿಲಲ್ಲಿ ಬಳಲಿ ಬಂದವರಿಗೆ ನೆರಳಿಲ್ಲ
ಹಸಿದು ಬಂದವರಿಗೆ ಹಣ್ಣು ಇಲ್ಲ
ಕುಸುಮ ವಾಸನೆಯಿಲ್ಲ ಕೂಡಲು ಸ್ಥಳವಿಲ್ಲ
ರಸದಲ್ಲಿ ಸ್ವಾದವು ವಿಷದಂತೆ ಇರುತಿಹ

ಊರಹಂದಿಗೆ ಷಡ್ರಸಾನ್ನವನಿಕ್ಕಲು
ನಾರುವ ದುರ್ಗಂಧ ಬಿಡಬಲ್ಲುದೆ
ಘೋರಪಾಪಿಗೆ ತತ್ವಜ್ಞಾನವ ಪೇಳಲು
ಕ್ರೂರ ಕರ್ಮವ ಬಿಟ್ಟು ಸುಜನನಾಗುವನೆ

ತನ್ನಿಂದ ಉಪಕಾರ ತೊಟಕಾದರೂ ಇಲ್ಲ
ಬಿನ್ನಾಣದ ಮಾತಿಗೆ ಕೊನೆಯಿಲ್ಲ
ಅನ್ನಕ್ಕೆ ಸೇರಿದ ಕುನ್ನಿ ಮಾನವರಂತೆ
ಇನ್ನಿವರ ಕಾರ್ಯವು ಪುರಂದರವಿಠಲ

ಪ್ರಶ್ನೆಗಳು :

I. ಯಾರಿಗೆ ನೆರಳು ಸಿಗುವುದಿಲ್ಲ ಎಂದು ಪುರಂದರದಾಸರು ಅಭಿಪ್ರಾಯಪಡುತ್ತಾರೆ ? 1

(A) ಬಳಲಿ ಬಂದವರಿಗೆ (B) ಮಲಗಿಕೊಂಡವರಿಗೆ
(C) ದುಡಿದಿರುವವರಿಗೆ (D) ಕುಳಿತಿರುವವರಿಗೆ

II. ದುರ್ಗಂಧ ಬಿಡದಿರುವುದು ಯಾವುದು ? 1

(A) ಊರ ನಾಯಿ (B) ಊರ ಹಂದಿ
(C) ತಿಪ್ಪೆಯಲ್ಲಿರುವ ಕಸ (D) ಮೈಯ ವಾಸನೆ

III. ತತ್ವಜ್ಞಾನವನ್ನು ಯಾರು ಕೇಳುವುದಿಲ್ಲ ? 1

(A) ಯುವಕರು (B) ತುಂಟ ಹುಡುಗರು
(C) ಘೋರ ಪಾಪಿಗಳು (D) ಪುರೋಹಿತರು

IV. ಜಾಲಿಯ ರಸಸ್ವಾದ ಹೇಗಿರುತ್ತದೆ ? 1

(A) ವಿಷದಂತೆ (B) ವಗರಿನಂತೆ
(C) ಸಿಹಿಯಂತೆ (D) ಹುಳಿಯಂತೆ

V. ಜಾಲಿಯ ಮುಳ್ಳು ಹೇಗೆ ಆವರಿಸಿರುತ್ತದೆ ? 1

(A) ಮೂಲಾಗ್ರ ಪರಿಯಂತ (B) ಎಲ್ಲ ಕಡೆ
(C) ಮೂಲದಲ್ಲಿ (D) ಬುಡದಲ್ಲಿ

6. ಕೆಳಗಿನ ಗದ್ಯಭಾಗವನ್ನು ಓದಿ, ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ. **5 × 1 = 5**

ಮೂಲೇಮನೆ ಮುದ್ದೇಗೌಡರಿಗೂ ಮೂತ್ರಪಿಂಡದ ಕಲ್ಲಾಗಿತ್ತು ಎಂದು ತಿಳಿದಾಗ, ಅವರ ಮನೆಗೂ ಹೋದೆ. 'ಓಹ್ ಈಗದೇನೂ ದೊಡ್ಡ ಆಪರೇಷನ್ ಅಲ್ಲಮ್ಮ. ನಾನು ನಾಲ್ಕು ಬಾರಿ ಮಾಡಿಸಿಕೊಂಡಿದ್ದೇನೆ.' ಎಂದು ಅಂಗಿ ಎತ್ತಿ ತೋರಿಸಿದರು. ಎರಡು ದೊಡ್ಡದಾಗಿ ಕೊಯ್ದ ಗಾಯದ ಗುರುತು, ಇನ್ನೆರಡು ಸಣ್ಣದು. 'ಮೊದಲೆಲ್ಲ ಹೀಗೆ ಕತ್ತರಿಸುತ್ತಿದ್ದರು, ಈಗ ನೋಡಿ ಲೇಸರ್ ಬಂದು ತುಂಬ ಸುಲಭ' ಹೇಳಿದರು. 'ಅಲ್ಲ ಅಷ್ಟು ಬಾರಿ ಕಲ್ಲು ಫಾರ್ಮ್ ಆಯ್ತಾ ?' ಕೇಳಿದೆ. 'ಅಯ್ಯೋ ಒಮ್ಮೆ ಬಂದ ಮೇಲೆ ಆಗ್ತಾನೇ ಇರುತ್ತೆ, ಏನು ಮಾಡೋಕಾಗುತ್ತೆ ?' ಉದಾಸೀನದಿಂದ ಹೇಳಿದರು. 'ನೀರು ಕುಡಿದ್ರೆ ಹತೋಟಿಗೆ ಬರುತ್ತೆ ಅಂತಾರೆ .. .. ?' ನಾನು ಹೇಳಿದೆ. 'ಅಯ್ಯೋ ಅದೆಲ್ಲ ಪಥ್ಯ ಯಾರು ಮಾಡೋಕೆ ಆಗುತ್ತೆ ? ಬಾಡು ತಿನ್ಬೇಡಿ, ಹಾಲಿನ ಪದಾರ್ಥಗಳನ್ನು ಜಾಸ್ತಿ ಸೇವಿಸಬೇಡಿ, ಸದಾ ನೀರು ಕುಡಿಯಿರಿ ಅಂತಾರೆ. ಅದೆಲ್ಲ ಆಗೋ ಮಾತಲ್ಲ ಬಿಡಿ' ಎಂದು ತಲೆ ಕೊಡವಿದರು. ಹಿಂತಿರುಗಿ ಬಂದು ಕೀರ್ತಿಗೆ ಹೇಳಿದೆ. 'ನೋಡು, ನಿನ್ನ ಎದುರು ಎರಡು ಆಯ್ಕೆಗಳಿವೆ. ಏನೂ ಮಾಡದೆ ಮುದ್ದೇಗೌಡರ ತರಹ ಎರಡೆರಡು ವರ್ಷಕ್ಕೆ ಆಪರೇಷನ್ ಮಾಡಿಸಿಕೊಳ್ಳೊದು. ಇಲ್ಲ ಕಮಲಮ್ಮ ಮೇಡಂ ತರಹ ಇನ್ನು ಮೇಲೆ ಚೆನ್ನಾಗಿ ನೀರು ಕುಡಿಯೋದು. ಮೊಳದುದ್ದ ಪಂಜಾಬಿ ಲೋಟದಲ್ಲಿ ಹಾಲು ಕುಡಿಯೋದು ಕಡಿಮೆ ಮಾಡು. ೮ ಮಿ.ಮೀ. ಕಲ್ಲು ಈಗ ಕರಗೋದು ಕಷ್ಟ. ಆದರೆ ಇದೇ ಮೊದಲ ಮತ್ತು ಕೊನೆಯ ಆಪರೇಷನ್ ಆಗಬೇಕು. ಈಗಿಂದ್ಲೇ ನೀರು ಕುಡಿಯೋಕೆ ಶುರು ಮಾಡೋಣ, ಎಳನೀರು ತರ್ತೀನಿ' ಎಂದು ಹೊರಟೆ. 'ಅದೆಲ್ಲ ಆಮೇಲೆ ಆರಂಭಿಸೋಣ, ಈಗ ಕುಡಿದ ತಕ್ಷಣ ಕಲ್ಲೇನೂ ಕರಗೋಲ್ಲ' ಕೀರ್ತಿ ಹೇಳಿದರು.

**ಪ್ರಶ್ನೆಗಳು.**

I. ಮೂಲೇಮನೆ ಮುದ್ದೇಗೌಡರು ಉದಾಸೀನದಿಂದ ಹೇಳಿದ ಮಾತು ? **1**

(A) ಅಯ್ಯೋ ಒಮ್ಮೆ ಬಂದ ಮೇಲೆ ಸರಿ ಹೋಗಲ್ಲ, ಏನು ಮಾಡೋಕಾಗುತ್ತೆ ?

(B) ಅಯ್ಯೋ ಒಮ್ಮೆ ಬಂದ ಮೇಲೆ ಆಗ್ತಾನೇ ಇರುತ್ತೆ, ಏನು ಮಾಡೋಕಾಗುತ್ತೆ ?

(C) ಅಯ್ಯೋ ಒಮ್ಮೆ ಬಂದ ಮೇಲೆ ಅನುಭವಿಸಬೇಕು ಏನು ಮಾಡೋಕಾಗುತ್ತೆ ?

(D) ಅಯ್ಯೋ ಒಮ್ಮೆ ಬಂದ ಮೇಲೆ ಮತ್ತೆ ಹೋಗೋದಿಲ್ಲ ಏನು ಮಾಡೋಕಾಗುತ್ತೆ ?

II. ಮೂತ್ರಪಿಂಡದಲ್ಲಿ ಕಲ್ಲು ಇರುವವರು ಯಾವ ಪದಾರ್ಥಗಳನ್ನು ಜಾಸ್ತಿ ಸೇವಿಸಬಾರದು ? **1**

(A) ಎಣ್ಣೆ ಪದಾರ್ಥಗಳನ್ನು ಜಾಸ್ತಿ ಸೇವಿಸಬಾರದು

(B) ಮಸಾಲೆ ಪದಾರ್ಥಗಳನ್ನು ಜಾಸ್ತಿ ಸೇವಿಸಬಾರದು

(C) ಹಾಲಿನ ಪದಾರ್ಥಗಳನ್ನು ಜಾಸ್ತಿ ಸೇವಿಸಬಾರದು

(D) ದ್ರವ ಪದಾರ್ಥಗಳನ್ನು ಜಾಸ್ತಿ ಸೇವಿಸಬಾರದು

III. ಕೀರ್ತಿಯ ಮೂತ್ರಪಿಂಡದಲ್ಲಿರುವ ಕಲ್ಲಿನ ಅಳತೆ ಎಷ್ಟು ? **1**

(A) ೮ ಮಿ.ಮೀ. (B) ೭ ಮಿ.ಮೀ.

(C) ೯ ಮಿ.ಮೀ. (D) ೬ ಮಿ.ಮೀ.

IV. ಮೂತ್ರಪಿಂಡದಲ್ಲಿರುವ ಕಲ್ಲು ಯಾವುದರಿಂದ ಹತೋಟಿಗೆ ಬರುತ್ತದೆ ? **1**

(A) ಕಡಿಮೆ ನೀರು ಕುಡಿಯುವುದರಿಂದ (B) ಸೋಸಿದ ನೀರು ಕುಡಿಯುವುದರಿಂದ

(C) ಹೆಚ್ಚು ನೀರು ಕುಡಿಯುವುದರಿಂದ (D) ನೀರು ಕುಡಿಯದೆ ಇರುವುದರಿಂದ

V. ಲೇಖಕಿ ನೇಮಿಚಂದ್ರ ಏನನ್ನು ತರಲು ಹೊರಟರು ? **1**

(A) ಔಷಧಿ ತರಲು (B) ಮಾತ್ರೆಗಳನ್ನು ತರಲು

(C) ನೀರು ತರಲು (D) ಎಳನೀರು ತರಲು

7. ಕೆಳಗಿನ ಗದ್ಯಭಾಗವನ್ನು ಓದಿ, ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ. **4 × 1 = 4**

ಮೆರವಣಿಗೆ ಮಾಡುತ್ತಿರಬೇಕಾದರೆ ಅದರ ಬೆನ್ನ ಮೇಲಿನ ಅಂಬಾರಿ ದಾರಿ ನಡುವೆ ಜೋಲು ಬಿದ್ದಿದ್ದ ಎಲೆಕ್ಟ್ರಿಕ್ ಲೈನಿಗೆ ತಾಗಿ ಫಟಾರ್ ಎಂದು ಪಟಾಕಿ ಹೊಡೆದಂತೆ ಶಬ್ದವಾಯ್ತಂತೆ. ಗಾಬರಿಯಾದ ಆನೆ ವೇಲಾಯುಧನ ಮಾತನ್ನೂ ಕೇಳದೆ ರಸ್ತೆ ಬಿಟ್ಟು ಗದ್ದೆಗಿಳಿದು ಕಾಡು ಬಿದ್ದು ಓಡಿಹೋಯ್ತಂತೆ. ಏಳೆಂಟು ಸಾವಿರ ರೂಪಾಯಿ ಹಿತ್ತಾಳೆ ಆಭರಣಗಳಿಂದ ಅದಕ್ಕೆ ಸಿಂಗಾರ ಮಾಡಿದ್ದರು. ಅವನ್ನೆಲ್ಲಾ ಕಾಡಪ್ಪ ಶೆಟ್ಟರು ಎಲ್ಲಿಂದಲೋ ಎರವಲು ತಂದುಕೊಟ್ಟಿದ್ದರಿಂದ ಕೊನೆ ಪಕ್ಷ ಅವನ್ನಾದರೂ ದೊರಕಿಸಿಕೊಳ್ಳಲು ಕಾಡಿನಲ್ಲಿ ಆನೆಗೆ ಹುಡುಕಾಡುತ್ತಿದ್ದರು. "ಕೃಷ್ಣೇಗೌಡರ ಆನೆ ಇಂಥ ಪುಂಡು ಆನೆ ಎಂದು ಗೊತ್ತಿರಲಿಲ್ಲ. ಗೂಳೂರು ಮಠದ ಜಗದ್ಗುರುಗಳು ಯಾವ ಧೈರ್ಯದ ಮೇಲೆ ಇದರ ಮೇಲೆ ಕುಳಿತುಕೊಳ್ಳುತ್ತಿದ್ದರೋ" ಎಂದು ಕಾಡಿನಲ್ಲಿ ಆನೆಗೆ ಬಾಯಿ ತುಂಬಾ ಬೈದರು. ಆನೆ ಓಡಿ ಬಂದು ಕಾಡಿನ ಆನೆಗಳ ಜೊತೆ

ಸೇರಿಕೊಂಡಿರಬಹುದೆಂದು ಊಹಿಸಿ ಕಾಡಿನಲ್ಲಿ ಅದನ್ನು ಹುಡುಕಲು ವೇಲಾಯುಧನೊಡನೆ ತಿರುಗುತ್ತಿದ್ದರು. ಮೈ ತುಂಬಾ ಸಿಂಗಾರ ಮಾಡಿಕೊಂಡು ಬೆನ್ನ ಮೇಲೆ ಅಂಬಾರಿ ಹೊತ್ತುಕೊಂಡಿದ್ದ ಈ ಆನೆಯನ್ನು ಕಾಡಾನೆಗಳು ತಮ್ಮ ಗುಂಪಿಗೆ ಸೇರಿಸಿಕೊಳ್ಳುತ್ತವೆಯೇ ಎಂದು ನನಗೆ ಅನುಮಾನ ಆಯ್ತು.

ಅದು ಕಾಡಿಗೆ ಓಡಿಹೋಗಿದ್ದನ್ನು ಮುಂದು ಮಾಡಿ ಅದು ಬೆದೆಗೆ ಬಂದ ಹೆಣ್ಣಾನೆಯಾದ್ದರಿಂದಲೇ ಕಾಡಿನ ಆನೆಗಳು ಊರಿಗೆ ಬಂದು ತೊಂದರೆ ಕೊಡುತ್ತಿದ್ದಾವೆಂದು ಫಾರೆಸ್ಟರ್ ನಾಗರಾಜ ಹೇಳಿದ. ಚಳವಳಿಗಾರರು ಆನೆಗೆ ಕರೆಂಟ್ ಶಾಕ್ ಹೊಡೆದುದರಿಂದಲೇ ಅದು ಓಡಿದೆ ಎಂದು ಹೇಳಿ ಅಷ್ಟೊಂದು ಕೆಳಗೆ ತಂತಿ ಎಳೆದಿದ್ದ ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟಿನವರನ್ನು ಬಯ್ದರು.

**ಪ್ರಶ್ನೆಗಳು.**

I. ಅಂಬಾರಿ ದಾರಿ ನಡುವೆ ಜೋಲು ಬಿದ್ದಿದ್ದ ಯಾವುದಕ್ಕೆ ತಾಗಿ ಫಟಾರ್ ಎಂದು ಪಟಾಕಿ ಹೊಡೆದಂತೆ ಶಬ್ದವಾಯ್ತು ? 1

(A) ಮರದ (B) ಎಲೆಕ್ಟ್ರಿಕ್ ಲೈನಿಗೆ

(C) ಟೆಲಿಫೋನ್ ಲೈನಿಗೆ (D) ಲಾರಿಗೆ

II. ಏಳೆಂಟು ಸಾವಿರ ರೂಪಾಯಿಯ ಯಾವ ಆಭರಣಗಳಿಂದ ಅದಕ್ಕೆ ಸಿಂಗಾರ ಮಾಡಿದ್ದರು ? 1

(A) ಹಿತ್ತಾಳೆ ಆಭರಣಗಳಿಂದ (B) ಬೆಳ್ಳಿ ಆಭರಣಗಳಿಂದ

(C) ಚಿನ್ನದ ಆಭರಣಗಳಿಂದ (D) ಕಂಚಿನ ಆಭರಣಗಳಿಂದ

III. ಮೊದಲು ಆನೆ ಮೇಲೆ ಯಾವ ಮಠದ ಜಗದ್ಗುರುಗಳು ಕುಳಿತುಕೊಳ್ಳುತ್ತಿದ್ದರು ? 1

(A) ಸಿರಿಗೆರೆ ಮಠದ ಜಗದ್ಗುರುಗಳು (B) ಸುತ್ತೂರು ಮಠದ ಜಗದ್ಗುರುಗಳು

(C) ಮುರುಘಾ ಮಠದ ಜಗದ್ಗುರುಗಳು (D) ಗೂಳೂರು ಮಠದ ಜಗದ್ಗುರುಗಳು

IV. ಆಭರಣಗಳನ್ನು ಯಾರು ಎರವಲು ತಂದಿದ್ದರು ? 1

(A) ಕಾಡಪ್ಪ ಶೆಟ್ಟರು (B) ಜಗದ್ಗುರುಗಳು

(C) ಫಾರೆಸ್ಟರ್ ನಾಗರಾಜ (D) ವೇಲಾಯುಧ

## PART – B

### Section – D

(ಪಠ್ಯಗಳ ಅಧ್ಯಯನ, ಕವಿ ಪರಿಚಯ ಮತ್ತು ಸೃಜನಾತ್ಮಕ ಬರವಣಿಗೆ : 40 ಅಂಕಗಳು)

8. ಕೆಳಗಿನ ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ. **3 × 2 = 6**

   I. ಕಲಾಂ ಅವರ ದೃಷ್ಟಿಯಲ್ಲಿ ಕನಸುಗಳು ಏನಾಗುತ್ತವೆ ?

   II. ಶುಚಿ ಮತ್ತು ಸ್ವಾದಗಳನ್ನು ಕುರಿತು ಸೋಮನಾಥನ ಅಭಿಪ್ರಾಯವೇನು ?

   III. ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು ?

9. ಕೆಳಗಿನ ವಾಕ್ಯಗಳಿಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **3 × 3 = 9**

   I. “ಕನ್ನಡಿಗರು ಮೊದಲು ಕನ್ನಡಿಗರಾಗಬೇಕು”

   II. “ಹಗೆಗಳನು ಹಿಂಡಿದನು ಮನದೊಳಗೆ”

   **ಅಥವಾ (OR)**

   “ಮಾತೇ ಮರೆತು ಹೋಗಿದೆ ಕಣೇ”

   III. “ಮುನ್ಸಿಪಾಲ್ ಪ್ರೆಸಿಡೆಂಟರಾಗಿ ಊರನ್ನು ಸ್ವಚ್ಛವಾಗಿಡೋದು ನಿಮ್ಮ ಕರ್ತವ್ಯ.”

10. ಕೆಳಗಿನ ಕವಿ / ಲೇಖಕರಲ್ಲಿ ಯಾರಾದರೂ **ಒಬ್ಬರ** ಬಗ್ಗೆ **ಆರೇಳು** ವಾಕ್ಯಗಳಲ್ಲಿ ಬರೆಯಿರಿ. **1 × 3 = 3**

   I. ಬಸವಣ್ಣ    II. ಹಾ.ಮಾ. ನಾಯಕ    III. ಪುರಂದರದಾಸ

11. ಕೆಳಗಿನ ಪ್ರಶ್ನೆಗಳಿಗೆ **ಎಂಟು–ಹತ್ತು** ವಾಕ್ಯಗಳಲ್ಲಿ ಉತ್ತರಿಸಿ. **3 × 4 = 12**

   I. ಚೆನ್ನಮ್ಮ ಮತ್ತೆ ಬೆಳ್ಳಿ ಲೋಟವನ್ನು ಹೊಳೆಗೆ ಎಸೆಯಲು ಕಾರಣವೇನು ? ವಿಶ್ಲೇಷಿಸಿ.

   **ಅಥವಾ (OR)**

   ಮುದ್ದಣ – ಮನೋರಮೆಯರ ಸಂವಾದದ ಸ್ವಾರಸ್ಯವನ್ನು ವಿವರಿಸಿ.

II. ಉರಿಲಿಂಗಪೆದ್ದಿಯ ವಚನಗಳ ಆಶಯವೇನು ?

**ಅಥವಾ (OR)**

'ಒಮ್ಮೆ ನಗುತ್ತೇವೆ ' ಕವನದಲ್ಲಿ ವ್ಯಕ್ತವಾಗಿರುವ ನಗುವಿನ ವೈಶಿಷ್ಟ್ಯವನ್ನು ವಿವರಿಸಿ.

III. ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಸವತಿ ಮಾತ್ಸರ್ಯ ಮೂಡಲು ಕಾರಣಗಳೇನು ?

**ಅಥವಾ (OR)**

ಎಲ್ಲರ ನಿರೀಕ್ಷೆಗಳು ಸುಳ್ಳಾಗುವಂತೆ ಕೃಷ್ಣೇಗೌಡ ಆನೆಯನ್ನು ಹೇಗೆ ಸಾಕಿದನು ?

12. ಕೆಳಗಿನ ಯಾವುದಾದರೂ **ಒಂದು** ವಿಷಯದ ಬಗ್ಗೆ **150-200** ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.

**1 × 5 = 5**

I. ಲಿಂಗ ಸಮಾನತೆ

II. ಪ್ಲಾಸ್ಟಿಕ್ ಮುಕ್ತ ಭಾರತದ ಅವಶ್ಯಕತೆ

III. ಜೀವನದಲ್ಲಿ ಶಿಸ್ತು ಮತ್ತು ಹೊಣೆಗಾರಿಕೆ

13. ನಿಮ್ಮ ಜಿಲ್ಲೆಯಲ್ಲಿ ಆರೋಗ್ಯ ಮತ್ತು ನೈರ್ಮಲ್ಯ ಜಾಗೃತಿ ಕಾರ್ಯಕ್ರಮವನ್ನು ಏರ್ಪಡಿಸುವಂತೆ ಕೋರಿ ಜಿಲ್ಲಾ ಆರೋಗ್ಯ ಅಧಿಕಾರಿಗೆ ಒಂದು ಪತ್ರ ಬರೆಯಿರಿ. **1 × 5 = 5**

**ಅಥವಾ (OR)**

ನಿಮ್ಮ ಊರಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ATM ಬ್ರಾಂಚ್ ತೆರೆಯುವಂತೆ ಕೋರಿ ಶಾಖಾ ವ್ಯವಸ್ಥಾಪಕರಿಗೆ ಒಂದು ಪತ್ರ ಬರೆಯಿರಿ.

---